aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Economics (Paper 1, Kannada Medium)

EXAM	YEAR	TYPE	SUBJECT
Karnataka Class 11	2027	Sample Paper	Economics

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

2026–27ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ–1

ವಿಷಯ: 22–ಅರ್ಥಶಾಸ್ತ್ರ **ಗರಿಷ್ಠ ಅಂಕಗಳು: 80**

ಸಮಯ: 3–00 ಗಂಟೆಗಳು **ಒಟ್ಟು ಪ್ರಶ್ನೆಗಳು: 44**

ಸೂಚನೆಗಳು: 1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.

2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.

3. ಭಾಗ–'ಎ' ನಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

4. ಭಾಗ–'ಎಫ್' ನಲ್ಲಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆಗಳನ್ನು ನೀಡಲಾಗಿದೆ.

ಭಾಗ–ಎ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **5x1=5**

1. ಪ್ರತಿವಾದಿಗಳ ಪ್ರತಿಕ್ರಿಯೆಯನ್ನು ನೋಡುವಂತಹ ದತ್ತಾಂಶ ಸಂಗ್ರಹಣೆಯ ವಿಧಾನವೆಂದರೆ

ಎ) ದೂರವಾಣಿ ಸಂದರ್ಶನ ಬಿ) ಅಂಚೆ ಪ್ರಶ್ನಾವಳಿ ಸಿ) ವೈಯಕ್ತಿಕ ಸಂದರ್ಶನ ಡಿ) ಇ–ಮೇಲ್

2. ದತ್ತಾಂಶಗಳನ್ನು ಅಡ್ಡಸಾಲು ಮತ್ತು ಕಂಬಸಾಲುಗಳಲ್ಲಿ ವ್ಯಕ್ತಪಡಿಸುವುದನ್ನು ಹೀಗೆನ್ನುತ್ತೇವೆ.

ಎ) ಪೈ–ನಕ್ಷೆ ಬಿ) ಸ್ತಂಭ ರೇಖಾಚಿತ್ರ

ಸಿ) ಸರಳ ರೇಖಾಚಿತ್ರ ಡಿ) ಕೋಷ್ಠಕ

3. ಶ್ರೇಣಿ ಸಹಸಂಬಂಧವನ್ನು ಅಭಿವೃದ್ಧಿಪಡಿಸಿದವರು

ಎ) ಕಾರ್ಲ್‌ಪಿಯರ್‌ಸನ್ ಬಿ) ಸಿ. ಇ. ಸ್ಪಿಯರ್‌ಮನ್ ಸಿ) ಜಾನ್ ಫೆಡರಿಕ್ ಡಿ) ಡಬ್ಲ್ಯೂ. ಹರ್ಷೆಲ್

4. 1991ರ ಹೊಸ ಆರ್ಥಿಕ ನೀತಿಯ ಅಡಿಯಲ್ಲಿ ಆರ್ಥಿಕ ಸುಧಾರಣಾ ಕ್ರಮಗಳನ್ನು ವಿಶಾಲವಾಗಿ ಎರಡು ಗುಂಪುಗಳಾಗಿ ವರ್ಗೀಕರಿಸಲಾದ ಕೆಳಗಿನ ಎರಡು ಕ್ರಮಗಳನ್ನು ಗುರುತಿಸಿ.

i) ರಾಷ್ಟ್ರೀಕರಣ ಕ್ರಮಗಳು

ii) ಸ್ಥಿರಾತ್ಮಕ ಕ್ರಮಗಳು

iii) ರಚನಾತ್ಮಕ ಸುಧಾರಣಾ ಕ್ರಮಗಳು

iv) ಭೂ ಸುಧಾರಣಾ ಕ್ರಮಗಳು

ಕೆಳಗೆ ನೀಡಿರುವ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ:

ಸಂಕೇತಗಳು;

ಎ) i ಮತ್ತು ii

ಬಿ) ii ಮತ್ತು iii

ಸಿ) ii ಮತ್ತು iv

ಡಿ) iii ಮತ್ತು iv

5. ಭಾರತದಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆ ಪ್ರಾರಂಭವಾದ ವರ್ಷ

ಎ) 1947 ಬಿ) 1951 ಸಿ) 1952 ಡಿ) 1956

aglasem.com For more Question Papers, Sample Papers, Notes & Syllabus visit aglasem.com Page 1 of 4

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ. **5x1=5**

(1921/ ಮಹಾತ್ಮ ಗಾಂಧಿ/ ಏಕ ಚಲಕ/ ಸಂಖ್ಯಾತ್ಮಕ/ 1995/ ಅವಿದ್ಯಾವಂತ)

6. ಒಂದು ಚಲಕದ ಆವೃತ್ತಿ ವಿತರಣೆಯನ್ನು _____ ವಿತರಣೆ ಎನ್ನುತ್ತಾರೆ.
7. _____ ಸಾಧನಗಳು ದಿನನಿತ್ಯದ ಜೀವನದಲ್ಲಿ ಮಹತ್ವದ್ದಾಗಿವೆ ಮತ್ತು ಇವುಗಳನ್ನು ಆರ್ಥಿಕ ಚಟುವಟಿಕೆಗಳ ವಿಶ್ಲೇಷಣೆಯಲ್ಲಿ ಉಪಯೋಗಿಸಲಾಗುತ್ತದೆ.
8. _____ ಭಾರತದ ಜನಸಂಖ್ಯಾ ಸ್ಥಿತ್ಯಂತರದ ಎರಡನೇ ಹಂತ ಪ್ರಾರಂಭವಾದ ವರ್ಷ.
9. ಆರ್ಥಿಕ ಬೆಳವಣಿಗೆಗೆ ವಿದ್ಯಾವಂತ ವ್ಯಕ್ತಿಯ ಕೊಡುಗೆಯು _____ ವ್ಯಕ್ತಿಗಿಂತ ಹೆಚ್ಚಾಗಿರುತ್ತದೆ.
10. ಶಿಕ್ಷಣ ಮತ್ತು ತರಬೇತಿಯ ಮೂಲಕ ಕರಕುಶಲವೂ ಸೇರಿದಂತೆ ವೈವಿಧ್ಯಮಯ ಕೆಲಸಗಳಿಗೆ ಹೆಚ್ಚು ಒತ್ತು ನೀಡಿದವರು _____

III. ಹೊಂದಿಸಿ ಬರೆಯಿರಿ. **5x1=5**

11.

A	B
a) ಸತತ ಚಲಕ	i) ಅಧಿಕ ಪ್ರಮಾಣದ ಉತ್ಪನ್ನವನ್ನು ನೀಡುತ್ತವೆ
b) ಬಹುಲಕ	ii) ಪುಣೆ
c) ಹೆಚ್.ವೈ.ವಿ ಬೀಜಗಳು	iii) ಸುಸ್ಥಿರ ಅಭಿವೃದ್ಧಿ
d) ಹಡಸ್ಪಾರ್ ಮಂಡಿ	iv) ವಿದ್ಯಾರ್ಥಿಯ ಎತ್ತರ
e) ಜೈವಿಕ ರೋಗ ನಿಯಂತ್ರಣ	v) ಹೆಚ್ಚು ಬಾರಿ ಪುನರಾವರ್ತಿತ ಪ್ರಾಪ್ತಾಂಕ
	vi) ಜಲ ಸಂಪನ್ಮೂಲ

IV. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ. **5x1=5**

12. ಆರ್ಥಿಕ ದತ್ತಾಂಶಗಳು ಎಂದರೇನು?
13. ಯಾವ ರೇಖಾಚಿತ್ರದಲ್ಲಿ ನಾವು ಮಧ್ಯಾಂಕದ ಮೌಲ್ಯವನ್ನು ಕಂಡುಹಿಡಿಯಬಹುದು?
14. ಸೂಚ್ಯಂಕ ಎಂದರೇನು?
15. NCERT - ವಿಸ್ತರಿಸಿ.
16. ಶಿಶು ಮರಣ ದರದ ಅರ್ಥ ನೀಡಿ.

ಭಾಗ–ಬಿ

V. ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ. **3x2=6**

17. ಉದ್ಯೋಗಿ ಮತ್ತು ಉದ್ಯೋಗದಾತರ ನಡುವಿನ ವ್ಯತ್ಯಾಸವನ್ನು ಬರೆಯಿರಿ.
18. ಸಂಖ್ಯಾಶಾಸ್ತ್ರವನ್ನು ಬಳಸಲ್ಪಡುವ ಯಾವುದಾದರೂ ಎರಡು ವಿಷಯಗಳನ್ನು ಹೆಸರಿಸಿ.
19. ಆವೃತ್ತಿ ವಕ್ರರೇಖೆಯನ್ನು ಹೇಗೆ ಪಡೆಯಬಹುದು?
20. ಧನಾತ್ಮಕ ಸಹಸಂಬಂಧ ಎಂದರೇನು? ಒಂದು ಉದಾಹರಣೆ ಕೊಡಿ.
21. ದತ್ತಾಂಶ ಸಂಗ್ರಹಣೆಯಲ್ಲಿ ಮಾಧ್ಯಮಿಕ ಮೂಲಗಳನ್ನು ಯಾವಾಗ ಬಳಸಲಾಗುತ್ತದೆ?

VI. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ. **4x2=8**

22. ವಸಾಹತುಶಾಹಿ ಆಳ್ವಿಕೆಯಲ್ಲಿ ಅಭಿವೃದ್ಧಿಯಾದ ಮೂಲಸೌಕರ್ಯಗಳು ಯಾವುವು?
23. ಆರೋಗ್ಯ ವೆಚ್ಚಗಳ ವಿವಿಧ ರೂಪಗಳನ್ನು ಪಟ್ಟಿ ಮಾಡಿ.
24. ಆರ್ಥಿಕತೆಯ ಮೂರು ವಲಯಗಳನ್ನು ಹೆಸರಿಸಿ.
25. NSSO ಪ್ರಕಾರ ನಿರುದ್ಯೋಗ ಎಂದರೇನು?
26. ಕೆಳಗಿನವುಗಳನ್ನು ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸಂಪನ್ಮೂಲಗಳಾಗಿ ವಿಂಗಡಿಸಿ.

i) ಪೆಟ್ರೋಲಿಯಂ ii) ಮೀನು iii) ಕಲ್ಲಿದ್ದಲು iv) ಮರಗಳು

27. ಎರಡು ಪ್ರಮುಖ ಜಾಗತಿಕ ಪರಿಸರ ಸಮಸ್ಯೆಗಳನ್ನು ಹೆಸರಿಸಿ.

ಭಾಗ–ಸಿ

VII. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. **2x4=8**

28. ಮಾದರಿ ಆಯ್ಕೆಯ ದೋಷಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
29. ದತ್ತಾಂಶಗಳ ವರ್ಗೀಕರಣದ ಬಗ್ಗೆ ಬರೆಯಿರಿ.
30. ಈ ಕೆಳಗಿನ ದತ್ತಾಂಶಗಳಿಗೆ ಮಧ್ಯಾಂಕವನ್ನು ಕಂಡುಹಿಡಿಯಿರಿ.

ತೂಕ	40	50	60	70	80	90
ವ್ಯಕ್ತಿಗಳ ಸಂಖ್ಯೆ	3	17	24	16	8	2

31. ಚದುರಿಕೆಯ ಚಿತ್ರ ಬಿಡಿಸಿ ಮತ್ತು ಸಹಸಂಬಂಧವನ್ನು ವ್ಯಾಖ್ಯಾನಿಸಿ.

X	1	2	3	4	5	6
Y	2	4	6	8	10	12

VIII. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. **4x4=16**

32. 'ಬ್ರಿಟೀಷರ ಆಳ್ವಿಕೆಯಲ್ಲಿ ಭಾರತದ ಕರಕುಶಲ ಕೈಗಾರಿಕೆಗಳು ನಾಶವಾದವು'. ಈ ಹೇಳಿಕೆಯನ್ನು ಸಮರ್ಥಿಸಿ.
33. ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶಗಳು ಯಾವುವು? ಇದರ ಸದಸ್ಯ ರಾಷ್ಟ್ರವಾಗಿ ಭಾರತದ ಪಾತ್ರವನ್ನು ವಿವರಿಸಿ.
34. ಭಾರತದಲ್ಲಿ ಮಹಿಳಾ ಶಿಕ್ಷಣವನ್ನು ಉತ್ತೇಜಿಸುವ ಅಗತ್ಯತೆಯನ್ನು ಚರ್ಚಿಸಿ.
35. ಕೃಷಿ ಮಾರುಕಟ್ಟೆಯ ದೋಷಗಳನ್ನು ವಿವರಿಸಿ.
36. ಸುಸ್ಥಿರ ಅಭಿವೃದ್ಧಿ ಸಾಧಿಸಲು ಹರ್ಮನ್ ಡ್ಯಾಲಿ ನೀಡಿರುವ ಸಲಹೆಗಳನ್ನು ವಿವರಿಸಿ.
37. ಚೀನಾದ 'ಮಹಾ ಮುಂಜಿಗಿತ ಅಭಿಯಾನ'ದ ಬಗ್ಗೆ ಬರೆಯಿರಿ.

ಭಾಗ–ಡಿ

IX. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ. **1x6=6**

38. ಈ ಕೆಳಕಂಡ ದತ್ತಾಂಶಗಳಿಗೆ ನೇರ ವಿಧಾನ, ಊಹಾತ್ಮಕ ಸರಾಸರಿ ವಿಧಾನ ಮತ್ತು ಹಂತ ವಿಚಲನಾ ವಿಧಾನಗಳ ಮೂಲಕ ಅಂಕಗಣಿತ ಸರಾಸರಿಯನ್ನು ಲೆಕ್ಕ ಮಾಡಿ.
    40, 50, 55, 78, 58
39. ಅನುಭೋಗಿ ಬೆಲೆ ಸೂಚ್ಯಂಕವನ್ನು ರಚಿಸುವಾಗ ಕಂಡು ಬರುವ ತೊಂದರೆಗಳನ್ನು ವಿವರಿಸಿ.

X. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ. **1x6=6**

40. ಈ ಕೆಳಗಿನ ಉದಾರೀಕರಣ ಕ್ರಮಗಳನ್ನು ಕುರಿತು ವಿವರಿಸಿ.
    ಎ) ಕೈಗಾರಿಕಾ ವಲಯದ ಅನಿರ್ಬಂಧೀಕರಣ
    ಬಿ) ಹಣಕಾಸು ವಲಯದ ಸುಧಾರಣೆಗಳು
41. ಸಾವಯವ ಬೇಸಾಯದ ಲಾಭಗಳು ಮತ್ತು ಮಿತಿಗಳನ್ನು ಪಟ್ಟಿ ಮಾಡಿ.

ಭಾಗ–ಇ

XI. ಈ ಕೆಳಗಿನ ಯಾವುದಾದರೂ ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ. **2x5=10**

42. ಕೆಳಗಿನ ದತ್ತಾಂಶಗಳನ್ನು ಪೈ ನಕ್ಷೆಯಲ್ಲಿ ನಿರೂಪಿಸಿ.

ವೆಚ್ಚದ ಬಾಬ್ತುಗಳು	ಖರ್ಚು ಮಾಡಿದ ಮೊತ್ತ (ರೂ.'00 ಗಳಲ್ಲಿ)
ಆಹಾರ	70
ಬಟ್ಟೆ	20
ಇಂಧನ	40
ಮನೆ ಬಾಡಿಗೆ	50
ಇತರೆ	20

43. ಈ ಕೆಳಗಿನ ಪಟ್ಟಿಯಿಂದ ಖಾಸಗಿ ವಲಯದ ಕೈಗಾರಿಕೆಗಳನ್ನು ಗುರುತಿಸಿ.

a) ಲಾರ್ಸನ್ ಮತ್ತು ಟಬ್ರೋ ಲಿ.
b) ಭಾರತ್ ಅರ್ಥ್ ಮೂವರ್ಸ್ ಲಿ.
c) ಎಚ್.ಡಿ.ಎಫ್.ಸಿ ಬ್ಯಾಂಕ್ ಲಿ.
d) ಭಾರತ್ ಎಲೆಕ್ಟ್ರಾನಿಕ್ಸ್ ಲಿ.
e) ರಿಲಯನ್ಸ್ ಇಂಡಸ್ಟ್ರೀಸ್ ಲಿ.
f) ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.
g) ಭಾರ್ತಿ ಏರ್‌ಟೆಲ್ ಲಿ.
h) ಮಾರುತಿ ಸುಜುಕಿ ಇಂಡಿಯಾ ಲಿ.
i) ಹಿಂದುಸ್ಥಾನ್ ಮೆಷಿನ್ ಟೂಲ್ಸ್ ಲಿ.
j) ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿ.

44. ಈ ಕೆಳಗಿನ ಪಟ್ಟಿಯಲ್ಲಿ ಔಪಚಾರಿಕ ಕೆಲಸಗಾರರನ್ನು ಗುರುತಿಸಿ.

a) ಬೇಕರಿ ಮಾಲೀಕ
b) ಕೈಮಗ್ಗದ ನೇಕಾರ
c) SBI ನ ಮ್ಯಾನೇಜರ್
d) ರಸ್ತೆ ಬದಿಯ ಮಾರಾಟಗಾರ
e) ಸರ್ಕಾರಿ ಆಸ್ಪತ್ರೆಯಲ್ಲಿನ ನರ್ಸ್
f) ಸರ್ಕಾರಿ ಶಾಲೆಯ ಶಿಕ್ಷಕ
g) ಬಡಗಿ
h) ಕಂದಾಯ ನಿರೀಕ್ಷಕರು
i) ಆರಕ್ಷಕರು
j) ಕೃಷಿ ಕಾರ್ಮಿಕರು

ಭಾಗ–ಎಫ್

ದೃಷ್ಟಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

42. ಕೋಷ್ಟಕದ ಯಾವುದಾದರೂ ಐದು ಭಾಗಗಳನ್ನು ವಿವರಿಸಿ.

*****

aglasem.com For more Question Papers, Sample Papers, Notes & Syllabus visit aglasem.com Page 4 of 4